3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No. 26/2020**

ಪ್ರಾಸಾ 8

ಚಾಸಾ 8

ಹೆಸರು ಸಿದ್ದೇಶ್

ತಂದಯ ಹೆಸರು ಉಮೇಶ್

ವಯಸ್ಸು 26 ವರ್ಷ

ಉದ್ಯೋಗ ಚಾಲಕ

ವಾಸಸ್ಥಳ ಅಂಡನಹಳ್ಳಿ

ಸಾಕ್ಷಿಯನ್ನು ದಿನಾಂಕ 08.06.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

1) ಈಗ ನನಗೆ ತೋರಿಸಿದ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲಾತಿಯು ಪಂಚರಿಗೆ ನೀಡಿರುವ ನೋಟೀಸು ಆಗಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ನಿಪಿ.2 ರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಆಗ ನನ್ನೊಂದಿಗೆ ಸಿದ್ದೇಶ್ ರವರು ಇದ್ದರು.

2) 2019 ರಲ್ಲಿ ನಾನು ಮತ್ತು ಚಾಸಾ.7 ರವರು ಸಿಂಗದಹಳ್ಳಿ ಗ್ರಾಮಕ್ಕೆ ನಾಟಿ ಔಷಧಿಯನ್ನು ತೆಗೆದುಕೊಳ್ಳಲು ಹೋಗಿದ್ದೆವು. ಆಗ ಭಾವಚಿತ್ರ ತೆಗೆದುಕೊಂಡ ಜಾಗಕ್ಕೆ ನಮ್ಮನ್ನು ಕರೆಸಿ ಮಹಜರ್ ಮಾಡಿಕೊಂಡು ಸಹಿಗಳನ್ನು ಪಡೆದುಕೊಂಡಿರುತ್ತಾರೆ . ಆಗ

ಒಬ್ಬಳು ಮಹಿಳೆ ಇದ್ದು ಅವರು ಯಾರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಮಾಡಿಕೊಳ್ಳಲು ಪೊಲೀಸರಿಗೆ ಸ್ಥಳದಲ್ಲಿದ್ದ ಮಹಿಳೆ ಕೊಟ್ಟಿರುತ್ತಾರೆ. ಸ್ಥಳದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ಮಾಡಿರುವ ಪಂಚನಾಮೆಗೆ ಭಾಗಶಃ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರ್ಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗಂಡು ಅನುಮತಿ ನೀಡಲಾಯಿತು)

**ಪಾಟೀಸವಾಲು: ಸರ್ಕಾರಿ ಅಭಿಯೋಜಕರವರಿಂದಃ**

3) ದಿನಾಂಕ 21.10.2019 ರಂದು ಸಂಜೆ 4 ರಿಂದ 5 ಗಂಟೆ ಸಮಯದಲ್ಲಿ ಪೊಲೀಸರು ನನ್ನನ್ನು ಮತ್ತು ಚಾಸಾ.7 ರವರನ್ನು ಕರೆದಿರುತ್ತಾರೆ ಎಂದರೆ ಸಾಕೆಯು ಆಗ ಮಧ್ಯಾಹ್ನ ಒಂದು ಗಂಟೆ ಆಗಿತ್ತು ಎಂದು ನುಡಿಯುತ್ತಾರೆ. ಭಾವಚಿತ್ರ (ನಿಪಿ.3 ರಿಂದ 5) ರಲ್ಲಿ ಕಾಣುವ ಮಹಿಳೆಯ ಹೆಸರು ಉಮಾದೇವಿ ಎಂದರೆ ಗೊತ್ತಿಲ್ಲ. ನಮ್ಮನ್ನು ಚಾಸಾ.1 ರವರಿಗೆ ಸೇರಿದ ಸಿಂಗದಹಳ್ಳಿ ಗ್ರಾಮದ ಸ.ನಂ.24/1 F ರ ಜಮೀನಿಗೆ ಬರಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ಆಗ ಚಾಸಾ.1 ರವರು ಆರೋಪಿತರು ತನ್ನ ಮೇಲೆ ಗಲಾಟೆ ಮಾಡಿ ಜಾತಿನಿಂದನೆ ಮಾಡಿದ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಪೊಲೀಸರು ನಕ್ಷೆಯನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈಗ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಮು.ಮಾ.1 ಮತ್ತು 2 ನ್ನು ಚಾಸಾ.1 ರವರು ಹಾಜರುಪಡಿಸಿದ್ದು ಅವುಗಳನ್ನು ಪೊಲೀಸರು ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಬರೆದುಕೊಂಡಿರುವ

ವಿಚಾರಗಳನ್ನು ನನಗೆ ಓದಿ ತಿಳಿಸುವಂತೆ ನಾನು ಪೊಲೀಸರಿಗೆ ಕೇಳಿರುವುದಿಲ್ಲ. ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ಪಂಚನಾಮೆಗೆ ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ.N.B. ವಕೀಲರಿಂದ :**

4) ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಪೊಲೀಸರು ನಮ್ಮನ್ನು ಕರೆಸಿ ಭಾವಚಿತ್ರಗಳನ್ನು ತೆಗೆಸಿರುತ್ತಾರೆ ಎಂದರೆ ಸರಿ. ಆ ಜಾಗದಲ್ಲಿ ನಾವು ಕೇವಲ 10 ರಿಂದ 15 ನಿಮಿಷಗಳ ಕಾಲ ಮಾತ್ರ ಇದ್ದೆವು ಎಂದರೆ ಸರಿ. ಉಳಿದ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು.

ಸಾಕ್ಷಿಯ ಸಹಿ